**ಒ.ಎಸ್.ನಂಬ್ರ:214/2010    ಡಿ.ಡಬ್ಲ್ಯೂ :  1**

ದಿನಾಂಕ: 26-07-2022 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲು:   ಶ್ರೀಎಮ್.ಜೆ.ಎಸ್. ವಕೀಲರಿಂದ**

ಈ ದಾವೆಯಿಲ್ಲಿ ಲಿಖಿತ ತಕರಾರು ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಬೇರೆ ಪ್ರತಿವಾದಿಯರು ಮಾಹಿತಿ ನೀಡಿರುವುದಿಲ್ಲ. ವಾದಿಯು ಈ ದಾವೆಯಲ್ಲಿ ಏನು ಸಾಧನೆ ಮಾಡುತ್ತಿದ್ದಾರೆ ಎಂದು ತಿಳಿದುಕೊಂಡಿರುತ್ತೇನೆ. ವಾದಿಯು ಹಾಜರುಪಡಿಸಿರುವ ದಾಖಲೆ ಗಳನ್ನು ಪರಿಶೀಲಿಸಿರುತ್ತೇನೆ. ಮೋಸದ ಕರಾರು ಪತ್ರ ವನ್ನು ನೋಡಿರುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ನೋಡಿರುವುದಿಲ್ಲ. ನನ್ನ ಪ್ರಕಾರ ವಾದಿಯು 2 ದಾಖಲೆ ಪತ್ರಗಳನ್ನು ನೋಡಿರುತ್ತಾನೆ. ಈ ದಾವೆಯಲ್ಲಿ ವಾದಿ ಮತ್ತು ಅವರ ಪರ ಸಾಕ್ಷಿದಾರರು ನೀಡಿರುವ ಸಾಕ್ಷಿಯನ್ನು ತಿಳಿದುಕೊಂಡಿರುತ್ತೇನೆ.

ನಾನು ಕಿರ್ಲೋಸ್ಕರ ಕಂಪನಿಯಲ್ಲಿ ನೌಕರಿಯಲ್ಲಿದ್ದು ಈಗ ನಿವೃತ್ತನಾಗಿರುತ್ತೇನೆ. ನಾನು ಬೆಂಗಳೂರಿನಲ್ಲಿ ಕೆಲಸ ನಿರ್ವಹಿಸಿರುತ್ತೇನೆ. ನಾನು 1980 ರಲ್ಲಿ ಸೇವೆಗೆ ಸೇರಿ 2013 ರಲ್ಲಿ ನಿವೃತ್ತಿನಾಗಿರುತ್ತೇನೆ. 1 ನೇ ಪ್ರತಿವಾದಿಯು ಬೆಂಗಳೂರಿನಲ್ಲಿ ದಿನಸಿ ಅಂಗಡಿ ವ್ಯವಹಾರ ಮಾಡಿಕೊಂಡು ಅಲ್ಲಿಯೇ ವಾಸವಾಗಿರುತ್ತಾರೆ. 2 ನೇ ಪ್ರತಿವಾದಿ ಆಸ್ಟ್ರೇಲಿಯಾದಲ್ಲಿ ಕೆಲಸದಲ್ಲಿರುತ್ತಾರೆ. 4 ನೇ ಪ್ರತಿವಾದಿಯ ಐಐಎಸ್ ಸಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ. 2 ನೇ ಪ್ರತಿವಾದಿ ಬೆಂಗಳೂರಿನಲ್ಲಿ ತನ್ನ ಕುಟುಂಬದ ಜೊತೆ ವಾಸವಾಗಿರುತ್ತಾರೆ. 6 ನೇ ಪ್ರತಿವಾದಿ ಬೆಂಗಳೂರಿನಲ್ಲಿ ವ್ಯವಹಾರ ಮಾಡಿಕೊಂಡಿರುತ್ತಾರೆ.

ನನ್ನ ತಂದೆ ಬೆಂಗಳೂರಿನಲ್ಲಿ ದಿನಸಿ ವ್ಯವಹಾರ ಮಾಡಿಕೊಂಡಿದ್ದರು ಅದನ್ನು ಈಗ 1 ನೇ ಪ್ರತಿವಾದಿ ಮುಂದುವರಿಸಿರುತ್ತಾರೆ. ನನ್ನ ತಂದೆಯವರು ಬಾಲ್ಯದಿಂದಲೇ ಊರನ್ನು ಬಿಟ್ಟು ಬೆಂಗಳೂರಿಗೆ ವ್ಯವಹಾರ ಬಾಬ್ತು ಹೋಗಿ ನೆಲೆಸಿರುತ್ತಾರೆ. ನನ್ನ ತಾಯಿಯ ಮದುವೆಯಾದ ನಂತರ ಬೆಂಗಳೂರಿಗೆ ಬಂದಿದ್ದು ನಾವು ಅಲ್ಲಿಯೇ ಹುಟ್ಟಿ ಬೆಳೆದಿರುತ್ತೇವೆ. ನನ್ನ ತಂದೆ-ತಾಯಿ ಪಿತ್ರ ಕಾರ್ಯಗಳಿಗೆ ಸಂಬಂಧಿಸಿದಂತೆ ಊರಿಗೆ ಬರುತ್ತಿದ್ದರು ಎಂದರೆ ಪಿತೃ ಕಾರ್ಯಗಳಿಗೆ , ಆಸ್ತಿ ನೋಡಿಕೊಳ್ಳಲು ಹಾಗೂ ತೆರಿಗೆ ಪಾವತಿಸಲು ಮೇಲಿಂದ ಮೇಲೆ ಬರುತ್ತಿದ್ದರು. ನಮ್ಮ ತಂದೆಗೆ ತೆಕ್ಕಟ್ಟೆ ಗ್ರಾಮದ ಬಾರಾಳಿ ಬೆಟ್ಟದಲ್ಲಿ ಆಸ್ತಿಯಿತ್ತು. 1974 ರ ಮುಂಚೆ ನನ್ನ ತಂದೆಯ ಬಾಬುತ ಆಸ್ತಿಗಳನ್ನು ಅವರ ತಾಯಿ ನೋಡಿಕೊಳ್ಳುತ್ತಿದ್ದು ಅವರು ಆಸ್ತಿಗಳನ್ನು ಗೇಣಿ ವಕ್ಕಲಿಗೆ ಸಾಗುವಳಿ ನೀಡಿದ್ದರು. ಭೂ ಸುಧಾರಣೆ ಕಾಯ್ದೆ ಪ್ರಕರಣ ಗೇಣಿ ದಾರರಿಗೆ ಸದ್ರಿ ಆಸ್ತಿಗಳನ್ನು ನೀಡಿರುತ್ತಾರೆ. ನನ್ನ ಪ್ರಕಾರ 1974 ರ ನಂತರ ನನ್ನ ತಂದೆಗೆ ಸ್ವಂತ ಆಸ್ತಿ ಇದ್ದರಲಿಲ್ಲ.

ನಾನು ದಾವಾ ಎ ಮತ್ತು ಬಿ ಶೆಡ್ಯೂಲ್ ಆಸ್ತಿಯನ್ನು ತೆಗೆದುಕೊಂಡಿರುತ್ತೇನೆ. ಮಂಜುನಾಥಯ್ಯ ಎನ್ನುವವರು ವಾದಿಯ ತಂದೆಯ ತಂದೆ ಎಂದರೆ ಸರಿ. ಶ್ರೀನಿವಾಸಯ್ಯ ಅಂದರೆ ಮಂಜುನಾಥಯ್ಯ ಅವರು ತಮ್ಮ. ನನ್ನ ತಾಯಿ ಶ್ರೀನಿವಾಸಯ್ಯ ಅವರ ಮಗಳು ಎಂದರೆ ಸರಿ. ಶ್ರೀನಿವಾಸಯ್ಯ ಮತ್ತು ವಾದಿಯ ತಂದೆ ಮದ್ದು ರಾಯ್ ಒಂದೇ

ಕುಟುಂಬದಿಂದ ಪಾಲಾದವರು ಎಂದರೆ ಸರಿಯಲ್ಲ, ಶ್ರೀನಿವಾಸಯ್ಯ ಮತ್ತು ಮದ್ದುರಾಯ್ ರವರ ತಂದೆ ಮಂಜುನಾಥಯ್ಯ ಒಂದೇ ಕುಟುಂಬದಿಂದ ಪಾಲಾಗಿರುತ್ತಾರೆ.

ದಾವಾ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳು ಸದ್ರಿ ಶ್ರೀನಿವಾಸಯ್ಯ ರವರು ಮೂಲಿ ಹಕ್ಕಿನ ಆಸ್ತಿಗಳು ಎಂದರೆ ಸರಿ. ಸದ್ರಿ ಶ್ರೀನಿವಾಸಯ್ಯ ರವರಿಗೆ ತೆಕ್ಕಟ್ಟೆ ಗ್ರಾಮದಲ್ಲಿ ದಾವಾ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇದ್ದವು. ಶ್ರೀನಿವಾಸಯ್ಯ ರವರ ಪತ್ನಿಯ ಹೆಸರು ಶೇಷಮ್ಮ ಎಂದರೆ ಸರಿ, ಅವರಿಗೆ ಮೂರು ಜನ ಮಕ್ಕಳು ಎಂದರೆ ಸೀತಮ್ಮ, ಲಕ್ಷ್ಮೀ ಮತ್ತು ಸಾವಿತ್ರಿಮ್ಮ, ಅವರಿಗೆ ಗಂಡು ಸಂತತಿ ಇರಲಿಲ್ಲ. 1964 ರಲ್ಲಿ ಶ್ರೀನಿವಾಸಯ್ಯ ತೀರಿಕೊಂಡಿರುತ್ತಾರೆ. ಶ್ರೀನಿವಾಸಯ್ಯ ನವರು ತಮ್ಮ ಜೀವಿತಾವದಿಯಲ್ಲಿ ತಮ್ಮ ಆಸ್ತಿಗಳ ಬಾಬ್ತು ದಿಃ 19-02-1954 ರಂದು ನೋಂದಾಯಿತ ವೀಲುನಾಮೆ ಮಾಡಿಟ್ಟಿದ್ದಾರೆ ಎಂದರೆ ದಿನಾಂಕ 19-07-1954 ರಂದು ಮಾಡಿಟ್ಟಿತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಸದ್ರಿ ವೀಲುನಾಮೆಯ ದಸ್ತಾವೇಜು ಸಂಖ್ಯೆ 12/1954 ಎಂದರೆ ಸರಿ. ಶ್ರೀನಿವಾಸಯ್ಯ ತೀರಿಕೊಂಡ ನಂತರ ಅವರ ಬಾಬ್ತು ಆಸ್ತಿ ವೀಲುನಾಮೆಯ ಪ್ರಕಾರ ಅವರ ಹೆಂಡತಿ ಶೇಷಮ್ಮ ರವರಿಗೆ ಬಂದಿತ್ತು ಎಂದರೆ ಸರಿ. ಶ್ರೀನಿವಾಸಯ್ಯ ರವರ ಆಸ್ತಿಗಳನ್ನು ಶೇಷಮ್ಮ ರವರ ಜೊತೆಗೆ ಅವರ ಮಗಳು ಲಕ್ಷ್ಮೀ ನೋಡಿಕೊಳ್ಳುತ್ತಿದ್ದರು. ಶೇಷಮ್ಮ ರವರು ತೀರಿಕೊಂಡ ನಂತರ ಸದ್ರಿ ಆಸ್ತಿಗಳು ನನ್ನ ತಾಯಿ ಸಾವಿತ್ರಮ್ಮನ ಹಕ್ಕು ಮತ್ತು ಸ್ವಾಧೀನಕ್ಕೆ ಒಳಪಡುತ್ತದೆ ಎಂದರೆ ಸರಿ. ಮೇಲೆ ಹೇಳಿದ ವೀಲುನಾಮೆಯ ಷರತ್ತಿನ ಪ್ರಕಾರ ಶೇಷಮ್ಮ ಮತ್ತು ಅವರ ಮಗಳು ಲಕ್ಷ್ಮೀ ರವರಿಗೆ ಜೀವಿತಾವದಿಯ ಹಕ್ಕು ಇದ್ದು ಸಾವಿತ್ರಮ್ಮ ಮತ್ತು ಅವರ ಮಕ್ಕಳಾದ 1 ಮತ್ತು 2 ನೇ ಪ್ರತಿವಾದಿಯರಿಗೆ ಸಂಪೂರ್ಣ ಹಕ್ಕು ಇತ್ತು ಎಂದರೆ ಸರಿ. ಸದ್ರಿ ನೋಂದಾಯಿತ ವೀಲುನಾಮೆಯ ಜೆರಾಕ್ಸ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಾನು ತಿಳಿದುಕೊಂಡಿರುತ್ತೇನೆ.

ಮೇಲೆ ಹೇಳಿದ ವೀಲುನಾಮೆ ತಯಾರಿಸುವಾಗ 1 ಮತ್ತು 2 ನೇ ಪ್ರತಿವಾದಿಯರು ಅಪ್ರಾಪ್ತ ವಯಸ್ಕರು ಎಂದರೆ ಸರಿ. ಆ ವೀಲುನಾಮೆಯ ಪ್ರಕಾರ ನನ್ನ ತಾಯಿ, 1 ಮತ್ತು 2 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳನ್ನು ಹೊರತುಪಡಿಸಿ ತೆಕ್ಕಟ್ಟೆ ಗ್ರಾಮ ಸರ್ವೇ ನಂಬ್ರ 14 ರಲ್ಲಿ 36 ಸೆಂಟ್ಸ್ ಸ್ಥಳ ಬಂದಿರುತ್ತದೆ.( ಸಾಕ್ಷಿಯು ಸದ್ರಿ ಸ್ಥಳವನ್ನು ಹೇಳಲು ಲೆಕ್ಕ ಮಾಡಿರುತ್ತಾರೆ). ಈಗಲೂ ಆ ಸ್ಥಳ ನಮ್ಮ ಸ್ವಾಧೀನದಲ್ಲಿರುತ್ತದೆ. ನನ್ನ ಪ್ರಕಾರ ದಾವಾ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳನ್ನು ಹೊರತುಪಡಿಸಿ ವೀಲುನಾಮೆಯ ಪ್ರಕಾರ ನನ್ನ ತಾಯಿ ಮತ್ತು 1 ಮತ್ತು 2 ನೇ ಪ್ರತಿವಾದಿಯ ಹಕ್ಕಿನಲ್ಲಿ ಉಳಿದಿತ್ತು. ಸದ್ರಿ ಆಸ್ತಿಗಳ ಆರ್ .ಟಿ.ಸಿ ಪ್ರತಿವಾದಿ 1 ರಿಂದ 6 ರ ಹೆಸರಿನಲ್ಲಿ ದಾಖಲಾಗಿರುತ್ತದೆ.

ವಾದಿಯ ಮನೆ ತೆಕ್ಕಟ್ಟೆ ಗ್ರಾಮದ ಸರ್ವೇ ನಂಬ್ರ 48/9 ರಲ್ಲಿದೆ ಎಂದು ಗೊತ್ತಿರುತ್ತದೆ. ದಾವಾ ಎ ಶೆಡ್ಯೂಲ್ ಐಟಂ ನಂಬ್ರ 1 ಮತ್ತು 2 ಸರ್ವೇ ನಂಬ್ರ 48/9 ಕ್ಕೆ ಹತ್ತಿಕೊಂಡಿದೆ ಎಂದರೆ ಸರಿ. ದಾವಾ ಎ ಶೆಡ್ಯೂಲ್ ಐಟಂ ನಂಬ್ರ 1 ಕ್ಕೆ ವಾದಿಯ ಬಾಬ್ತು ತೆಕ್ಕಟೆ ಗ್ರಾಮದ ಸರ್ವೇ ನಂಬ್ರ 37 ಕ್ಕೆ ಹತ್ತಿಕೊಂಡಿದೆ ಎಂದರೆ ಸರಿ. ದಾವಾ ಬಿ ಶೆಡ್ಯೂಲ್ ಆಸ್ತಿಯ ಗಡಿ ಭಾಗಗಳನ್ನು ಹೇಳಲು ಬರುತ್ತದೆ ಎಂದರೆ ಬಹಳ ಹಿಂದೆ ಸದ್ರಿ ಆಸ್ತಿಗಳನ್ನು ಮಾರಾಟ ಮಾಡಿದ ಕಾರಣ ಹೇಳಲು ಬರುವುದಿಲ್ಲ. ದಾವಾ ಬಿ ಶೆಡ್ಯೂಲ್ ಆಸ್ತಿಗಳು ವಾದಿಯ ಬೇರೆ ಆಸ್ತಿಗಳಿಗೆ ಲಗತ್ತಾಗಿ ಹೊಂದಿಕೊಂಡಿದ್ದವು ಎಂದರೆ ಸರಿ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**